**ಕೊಂಕಣಿ ಕತೆಗಾರನಿಗೆ ಜ್ಞಾನಪೀಠ**

# ಗೋವಾದ ಸಂಭ್ರಮ-ಸಂಘರ್ಷಕ್ಕೆ ಮಾವ್‌ಜೊ ಕಥಾಕನ್ನಡಿ

**ಕೊಂಕಣಿಯ ಪ್ರತಿಭಾಶಾಲಿ ಕತೆಗಾರ, ಕಾದಂಬರಿಕಾರ ದಾಮೋದರ ಮಾವ್‌ಜೊ ಅವರಿಗೆ ಈ ಬಾರಿಯ ಜ್ಞಾನಪೀಠ ಪ್ರಶಸ್ತಿ ಸಂದಿದೆ. ಅವರ ಬದುಕು–ಸಾಹಿತ್ಯದ ಕುರಿತಾದ ಪುಟ್ಟ ಪರಿಚಯ.**

**ಶಾ.ಮಂ. ಕೃಷ್ಣರಾಯ**

ಕರ್ನಾಟಕದ ಕರಾವಳಿಯ ಭಾಷೆಗಳಲ್ಲಿ ಕೊಂಕಣಿಯೂ ಒಂದು. ಗೋವೆಯ ರಾಜ್ಯಭಾಷೆ ಕೊಂಕಣಿ. ದೇವನಾಗರಿ, ಕನ್ನಡ, ರೋಮನ್, ಉರ್ದು, ಮಲಯಾಳಂ ಲಿಪಿಗಳಲ್ಲಿ ಕೊಂಕಣಿಯನ್ನು ಬರೆಯುತ್ತಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ದೇವನಾಗರಿ ಲಿಪಿಯನ್ನು ಒಪ್ಪಿಕೊಂಡಿದೆ. ಆದ್ದರಿಂದ ಪ್ರಶಸ್ತಿ, ಪುರಸ್ಕಾರಗಳು ದೇವನಾಗರಿ ಲಿಪಿಯಲ್ಲಿ ಬರೆಯುವವರಿಗೆ ಮಾತ್ರ ಸಿಗುತ್ತವೆ.

ಕೊಂಕಣಿ ಭಾಷೆಯಲ್ಲಿ ಸಾವಿರಾರು ಪುಸ್ತಕಗಳು ಪ್ರಕಟವಾಗಿವೆ. ನೂರಾರು ಲೇಖಕರು ಬರೆಯುತ್ತಾರೆ. ಅವರಲ್ಲಿ ಇಬ್ಬರಿಗೆ ಜ್ಞಾನಪೀಠ, ಒಬ್ಬರಿಗೆ ಸರಸ್ವತಿ ಸಮ್ಮಾನ ಪ್ರಶಸ್ತಿಗಳು ಬಂದಿವೆ. 2006ರಲ್ಲಿ ಗಾಂಧಿ ಸಾಹಿತ್ಯ ಅನುವಾದಿಸಿದ, ವಿಚಾರವಾದಿ, ಅಂಕಣ ಬರಹಗಾರ, ಕೊಂಕಣಿ, ಇಂಗ್ಲಿಷ್, ಮರಾಠಿಯಲ್ಲಿ ಬರೆಯುತ್ತಿದ್ದ ರವೀಂದ್ರ ಕೇಳೇಕಾರರಿಗೆ ಪ್ರಥಮ ಜ್ಞಾನಪೀಠ ಲಭಿಸಿತು. ಈ ವರ್ಷ ತಮ್ಮ ಕತೆ, ಕಾದಂಬರಿಗಳಿಂದ ಪ್ರಸಿದ್ಧರಾದ ದಾಮೋದರ ಮಾವ್‌ಜೊ ಅವರಿಗೆ ಜ್ಞಾನಪೀಠ ಬಂದಿದೆ.

ದೇವನಾಗರಿ ಲಿಪಿಯಲ್ಲಿ ಬರೆಯುವ ಮುಂಚೂಣಿ ಕಥಾ ಲೇಖಕರಲ್ಲಿ ಚಂದ್ರಕಾಂತ ಕೇಣಿ, ಪುಂಡಲೀಕ ನಾಯಕ, ಮೀನಾ ಕಾಕೋಡ್ಕರ್, ಲಕ್ಷ್ಮಣರಾವ್ ಸರ್‌ದೇಸಾಯಿ, ಅ.ನಾ. ಮ್ಹಾಂಬ್ರೊ, ಎನ್. ಶಿವದಾಸ, ದಾಮೋದರ ಮಾವ್‌ಜೊ, ಮಹಾಬಳೇಶ್ವರ ಸೈಲ, ಗೋಕುಲದಾಸ ಪ್ರಭು, ಶೀಲಾ ಕೊಳೆಂಬಕಾರ್, ಜಯಮಾಲ ದಣಾಯತ್, ದಿಲೀಪ್ ಬೋರಕಾರ್, ದೇವಿದಾಸ ಕದಮ್, ಡಾ. ಜಯಂತಿ ನಾಯಕ ಮೊದಲಾದವರಿದ್ದಾರೆ. ಇನ್ನು ಕೆಲವರು ಆರಂಭದಲ್ಲಿ ಒಳ್ಳೆಯ ಕತೆಗಳನ್ನು ಕೊಟ್ಟರೂ ಸಾತತ್ಯ ಉಳಿಸಿಕೊಳ್ಳಲಾಗಲಿಲ್ಲ.

ದಾಮೋದರ ಮಾವ್‌ಜೊ ವೃತ್ತಿಯಿಂದ ವ್ಯಾಪಾರಿ. ಅವರ ತಂದೆಯವರು ತೆರೆದ ಕಿರಾಣಿ ಅಂಗಡಿಯನ್ನು ಬಹಳ ವರ್ಷ ಮುಂದುವರಿಸಿಕೊಂಡು ಬಂದಿದ್ದರು. ಕಳೆದ ಕೆಲವು ವರ್ಷಗಳ ಹಿಂದೆ